ಸ್ವಲ್ಪ ಕಷ್ಟವಾಗಬಹುದು, ರಸ್ತೆಗಳಿಗೆ ತೋಟಗಳಿಗೆ ರಾತ್ರಿಯಲ್ಲಿ ಕೆಲವು ಬೆಳಿಗಳಿಗೆ ಸಹಕಾರಿ ಆಗಬಹುದು ರಾತ್ರಿ ವೇಳೆ ವಿದ್ಯುತ್ ಸರಬರಾಜು ಮಾಡುವುದರಿಂದ ರೈತರಿಗೂ ಅನುಕೂಲವಾಗುತ್ತದೆ, ಮಂಡಲಿಯವರಿಗೂ ಅನುಕೂಲವಾಗುತ್ತದೆ. ಬೆಳಿಗ್ಗೆ ಹೊತ್ತು ವೋಲ್ಟೇಜ್ ಕಡಿಮೆ ಆಗಿರುತ್ತದೆ. ೨೯ ರಂದು ಪವರ್ ರಿವ್ಯೂ ಕಮಿಟಿಯಲ್ಲಿ ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟು ಕೊಂಡು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ರಾಮಯ್ಯ.—ಕರೆಂಟ್ ಅನ್ನು ಕೊಡಬೇಕಾದ ಸಮಯದಲ್ಲಿ ಸಹ ಕೊಡುವುದಿಲ್ಲ. ಇದರ ಬಗ್ಗೆ ಗಮನವನ್ನು ತಾವು ಹರಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಕೆಲವೊಂದು ತಾಂತ್ರಿಕ ಕಾರಣಕ್ಕೋಸ್ಕರ ಒಂದು ಗಂಟೆ. ಎರಡೂ ಗಂಟೆ ವಿದ್ಯುಚ್ಛಕ್ತಿ ಹೋಗುತ್ತದೆ. ಆ ತೊಂದರೆಯನ್ನು ಪರಿಹರಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತೇವೆ.

ನಿಯಮ ೩೫೪ ರ ಮೇರೆಗೆ

(೧) ನೇತ್ರಾವತಿ ನದಿ ನೀರಿನ ಸರಬರಾಜನ್ನು ಕೃಷಿಕರಿಗೆ ನಿಲ್ಲಿಸುವುದರಿಂದ ತೊಂದರೆ

ಶ್ರೀ ವಿನಯ ಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರಿನಲ್ಲಿ ಕಾರ್ಪೊರೇಷನ್‌ನಿಂದ ನೀರು ಸರಬರಾಜು ಆಗಬೇಕು. ನೀರು ಸರಬರಾಜು, ಕುಮಾರಧಾರ, ನೇತ್ರಾವತಿಯಿಂದ ಆಗಬೇಕು. ಫೆಬ್ರುವರಿ ನಂತರ ಈ ನೀರು ಸರಬರಾಜನ್ನು ಡಿಸ್ಕನೆಕ್ಟ್ ಮಾಡುವ ದೃಷ್ಟಿಯಿದೆ. ಇದರಿಂದ ಕೃಷಿಕರಿಗೆ ಬಡವರಿಗೆ ತೊಂದರೆ ಆಗುತ್ತದೆ. ಡಿಸ್ಕನೆಕ್ಷನ್ ಮಾಡುವುದಿಲ್ಲ. ಎಂಬ ಆಶ್ವಾಸನೆಯನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಹಿಂದಿನ ವರ್ಷ ಡಿಸ್ಕನೆಟ್ ಮಾಡಬೇಕೆಂಬ ವಿಚಾರ ಬಂದಿತ್ತು, ಇನ್ನು ಮುಂದೆ ಮಾಡುವುದಿಲ್ಲ.

(2) ಬೆಂಗಳೂರು ನಗರ ಕಾರ್ಪೋರೇಷನ್ನಿನ ವ್ಯಾಪ್ತಿಯಲ್ಲಿರುವ ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವಾಗ ಬೆಟರ್‌ಮೆಂಟ್ ಚಾರ್ಜು ವಿಧಿಸುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರ ಕಾರ್ಪೊರೇಷನ್ ವ್ಯಾಪ್ತಿಯಲ್ಲಿರುವ ಖಾಲಿಯಿರುವ ನಿವೇಶನಗಳಲ್ಲಿ ಮನೆ ಕಟ್ಟಲು ಲೈಸೆನ್ಸ್ ಕೇಳಿದಾಗ ಬೆಟರ್‌ಮೆಂಟ್ ಚಾರ್ಜು ಎಂದು ಒಂದು ನಿವೇಶನಕ್ಕೆ ಮನೆ ಕಟ್ಟುವ ಹಾಗಿದ್ದರೆ ಮೀಟರಿಗೆ ಐದು ರೂಪಾಯಿ, ವರ್ಕ್‌ಶಾಪ್ ಇಡುವ ಹಾಗಿದ್ದರೆ ಹತ್ತು ರೂಪಾಯಿ, ಅಂಗಡಿ ಅಥವಾ ಹೋಟೆಲಾದರೆ ಇಪ್ಪತ್ತೈದು ರೂಪಾಯಿಗಳನ್ನು ಹಾಕಿರುವ ಶುಲ್ಕ ತುಂಬಾ ಅನ್ಯಾಯ ಕಟ್ಟುವ ಜಾಗ ಸ್ವಲ್ಪವಿದ್ದರೂ ಅದನ್ನು ಪರಿಗಣಿಸದೆ ಒಟ್ಟು ನಿವೇಶನದ ವಿಸ್ತೀರ್ಣಕ್ಕೆಲ್ಲ ಶುಲ್ಕ ವಿಧಿಸುವುದು ನ್ಯಾಯ ನೀತಿಗೆ ವಿರೋಧವಾಗಿದೆ. ಈ ಬಗ್ಗೆ ಜನತೆಯ ಪ್ರತಿಭಟನೆಯನ್ನು ಸೂಚಿಸಿದ್ದಾರೆ ಈ ನೀತಿಯನ್ನು ಪುನರ್ ವಿಮರ್ಶಿಸುವುದಾಗಿ ಸರ್ಕಾರ ಮತ್ತು ನಗರ ಕಾರ್ಪೊರೇಷನ್‌ರವರು ಒಪ್ಪಿಕೊಂಡಿದ್ದರೂ ಪುನರ್ ವಿಮರ್ಶಿಸಿದ ಕಾರಣ, ಸಾವಿರಾರು ಜನ ತಮ್ಮ ಮನೆಗಳನ್ನು ಕಟ್ಟಿದೆ. ಕಟ್ಟಿಡದ ಕೆಲಸಗಳು ಸ್ಥಗಿತಗೊಂಡಿದೆ. ಸರ್ಕಾರ ಈ ನೀತಿಯನ್ನು ಮತ್ತು ನಿಯಮವನ್ನು ಪುನರ್ ವಿಮರ್ಶಿಸಿ ಮೊದಲು ಅನುಸರಿಸಿದ ನೀತಿ ನಿಯಮಗಳ ಪ್ರಕಾರ ಕಟ್ಟಿಡಗಳನ್ನು ಕಟ್ಟಲು ಅನುಮತಿ ನೀಡುವುದು ನ್ಯಾಯ ಸಮ್ಮತವಾಗಿರುವುದರಿಂದ ಈ ಬಗ್ಗೆ ಸರ್ಕಾರ ತನ್ನ ಹೇಳಿಕೆಯನ್ನು ಸದನಕ್ಕೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈಗ ಸದಸ್ಯರು ಹೇಳಿದ ಹಾಗೆ ಅಭಿವೃದ್ಧಿ ಶುಲ್ಕ ಬೆಟರ್‌ಮೆಂಟ್ ಛಾರ್ಜ್ ಇದುವರೆಗೆ ನಿವೇಶನ ಎಷ್ಟು ಅಳತೆ ಇತ್ತೋ ಆದರ ಮೇಲೆ ಹಾಕಲಾಗುತ್ತಿತ್ತು. ೧ ಅಥವಾ ೨ ರೂಮ್ ಇದ್ದು ಸಂದರ್ಭದಲ್ಲಿ ಪೂರ್ಣವಾಗಿ ನಿವೇಶನಕ್ಕೆ ಹಾಕಿದ್ದರೆ ಶುಲ್ಕ ಹೆಚ್ಚು ಆಗುತ್ತದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ನಾವು ಇದರ ಬಗ್ಗೆ ಈಗಾಗಲೇ

ಕ್ರಮ ತೆಗೆದುಕೊಂಡು ಒಂದು ಸಮಿತಿಯನ್ನು ಮಾಡಿದ್ದೇವೆ, ಆದರಿಂದ ಒಂದು ವರದಿ ಇಷ್ಟರಲ್ಲೇ ಬರಲಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅದರಲ್ಲಿ ಏನಾದರೂ ನ್ಯೂನತೆಗಳು ಗಮನಕ್ಕೆ ಬಂದರೆ ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

(೩) ಸಂಕೇಶ್ವರ ನಗರದ ಕೆ. ಎಸ್. ಆರ್. ಟಿ. ಸಿ. ಬಸ್ ನಿಲ್ದಾಣವನ್ನು ಸಂಸಜ್ಜಿತಗೊಳಿಸುವುದು.

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸಂಕೇಶ್ವರ ನಗರದಲ್ಲಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸ್ಟ್ಯಾಂಡ್ ಜನರಿಗೆ ಆದ್ಯತ ಸ್ಟ್ಯಾಂಡ್ ಎಂದು ಜನರಿಗೆ ಭಾವನೆಯಾಗಿದೆ, ಬಸ್ ಸ್ಟ್ಯಾಂಡ್ ಆವರಣದಲ್ಲಿರುವ ರಸ್ತೆ ಇದೆಯೋ ಅಥವಾ ತಗ್ಗು ಇದೆಯೋ ಅರ್ಥ ಮಾಡಿಕೊಳ್ಳುವುದೇ ಕಠಿಣವಾಗಿದೆ. ರಸ್ತೆಯಲ್ಲಿ ತಗ್ಗು ಅಥವಾ ತಗ್ಗಿನಲ್ಲಿ ರಸ್ತೆ. ಬಸ್‌ನಲ್ಲಿ ಬಸ್ ಸ್ಟ್ಯಾಂಡೋ ಅಥವಾ ಬಸ್ ಸ್ಟ್ಯಾಂಡ್‌ನಲ್ಲಿ ಬಸ್ಸೋ ಎಂಬ ಪ್ರಶ್ನೆಗೆ ಉತ್ತರ ಸಿಗದು.

ಮೂತ್ರಾಲಯಕ್ಕೆ ಹೋಗಬೇಕಾದರೆ ಮೂಗನ್ನು ತೆಗೆದಿಟ್ಟು ಹೋಗಬೇಕು ಹಾಗೂ ಬೇರೆ ರಾಜ್ಯದಿಂದ ಈ ಬಸ್ ಸ್ಟ್ಯಾಂಡಿಗೆ ಬರುವ ಪ್ರವಾಸಿಗರಿಂದ ಸರ್ಟಿಫಿಕೇಟ್ ಕೊಟ್ಟು ಈ ಬಸ್ ಸ್ಟ್ಯಾಂಡನ್ನು ರಾಜ್ಯದಲ್ಲಿ ಪ್ರಥಮದರ್ಜೆ ಬಸ್ ಸ್ಟ್ಯಾಂಡ್ ಎಂದು ಪ್ರಕಟಿಸಿ ಕೊಡಬೇಕಾಗಿತ್ತದೆ. ಈ ಬಸ್ ಸ್ಟ್ಯಾಂಡ್ ಸುತ್ತ ಮುತ್ತಲೂ ಹೇಳತೀರದಷ್ಟು ಗಲೀಜು ವಾತವರಣವಿದ್ದು, ಬಸ್ ಸ್ಟ್ಯಾಂಡು ಅಥವಾ ಕೊಳಚೇ ಪ್ರದೇಶವೋ ಎಂಬುದನ್ನು ನಿರ್ಣಯಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಒಂದಾನೊಂದು ಕಾಲದಲ್ಲಿ ಸಂಕೇಶ್ವರ ಬಸ್ ಸ್ಟ್ಯಾಂಡು ಎಲ್ಲಾ ರೀತಿಯಲ್ಲಿ ಕೂಡ ಪ್ರಶಸ್ತಿ ಪಡೆಯುತ್ತಿದ್ದ ಬಸ್ ಸ್ಟ್ಯಾಂಡ್ ಆಗಿತ್ತು. ಬಸ್ ಸ್ಟ್ಯಾಂಡ್ ಸಂಧಾರಣೆಗಾಗಿ ಕಳೆದ ಹತ್ತು ವರ್ಷಗಳಲ್ಲಿ ಮಂಜೂರಾಗಿರುವ ಹಣದ ವಿವರ ಹಾಗೂ ಹಣ ಖರ್ಚು ಮಾಡದೆ ಇರುವುದಕ್ಕೆ ಕಾರಣ ಕರ್ನಾಟಕ ಮಹಾರಾಷ್ಟ್ರದ ಗಡಿಯಲ್ಲಿರುವ ಈ ಬಸ್ ಸ್ಟ್ಯಾಂಡನ್ನು ಸರ್ವ ರೀತಿಯಲ್ಲಿ ಸುಸಜ್ಜಿತ ಮಾಡಲು ಸರಕಾರವನ್ನು ಕೇಳಿಕೊಂಡರೂ ಕೂಡ ಸರಕಾರದಿಂದ ಯಾವುದೇ ಉತ್ತರವಿಲ್ಲ. ಈಗಿರುವ ಕಟ್ಟಡವನ್ನು ಸಂಪೂರ್ಣವಾಗಿ ಕೈಬಿಟ್ಟು ಹೊಸ ಮಾದರಿಯ ಬಸ್ ಸ್ಟ್ಯಾಂಡನ್ನು ಕಟ್ಟಿಸುವುದಕ್ಕಾಗಿ ಜನರು ಕಾತುರರಾಗಿರುತ್ತಾರೆ. ಮಾನ್ಯ ಸಾರಿಗೆ ಮಂತ್ರಿಗಳು ಕೂಡಲೇ ವಿಮಾನದಿಂದ ಹೋಗಿ ಈ ಬಸ್ ಸ್ಟ್ಯಾಂಡನ್ನು ಪ್ರವಾಸಿಗರಂತೆ ಹೋಗಿ ಬರಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ಇದರ ಬಗ್ಗೆ ವಿಧಾನಸಭೆಯಲ್ಲಿ ಸೂಕ್ತ ಉತ್ತರ ಬಯಸುತ್ತೇನೆ.

೧೧–೩೦ ಎ.ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸಂಕೇಶ್ವರದಲ್ಲಿ ರಾಜ್ಯರಸ್ತೆ ಸಾರಿಗೆ ನಿಗಮದ ಬಸ್ ನಿಲ್ದಾಣದ ಆವರಣದಲ್ಲಿ ಅಲ್ಲಲ್ಲಿ ತಗ್ಗು ಬಾಂಟಾಗಿರುವುದು ಸಾರಿಗೆ ನಿಗಮದ ಗಮನಕ್ಕೆ ಬಂದಿದೆ. ಆದ್ದರಿಂದ ೧೯೮೭–೮೮ನೇ ಸಾಲಿನಲ್ಲಿ ಆವರಣಕ್ಕೆ ಸಂಮಾರು ೪ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಡಾಂಬರು ಹಾಕಲು ಯೋಚಿಸಲಾಗಿದೆ. ಅಂದಾಜು ಪಟ್ಟಿಗಳನ್ನು ಸಿದ್ಧಪಡಿಸಿ ಟೆಂಡರ್‌ಗಳನ್ನು ಕರೆದು ಕಾರ್ಯವನ್ನು ಕೈಗೊಳ್ಳಲಾಗುವುದು.

ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಮುಖ್ಯ ಪಟ್ಟಣಗಳಲ್ಲಿರುವ ಸಾರಿಗೆ ನಿಗಮದ ಬಸ್ ನಿಲ್ದಾಣಗಳ ಶೌಚಾಲಯಂಗಳನ್ನು ನವೀಕರಿಸುವ ಯೋಜನೆಯನ್ನು ಹಾಕಿಕೊಂಡಿದ್ದು, ಸಾರಿಗೆ ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಅವುಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಅದರಂತೆ ಸಂಕೇಶ್ವರ ಬಸ್ ನಿಲ್ದಾಣದಲ್ಲೂ ಶೌಚಾಲಯವನ್ನು ನವೀಕರಿಸಲು ಕ್ರಮ ಕೈಗೊಳ್ಳಲಾಗುವುದು.

ಸಾಮಾನ್ಯವಾಗಿ ಅವಶ್ಯಕತೆಗೆ ಅನುಗುಣವಾಗಿ ಬಸ್ ನಿಲ್ದಾಣದ ಕಟ್ಟಡಕ್ಕೆ ದುರಸ್ತಿ ಕಾರ್ಯವನ್ನು ಹಾಗೂ ಆವರಣ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು. ಸಂಕೇಶ್ವರ ಬಸ್ ನಿಲ್ದಾಣಕ್ಕೆ ಇದುವರೆವಿಗೂ ಎಂದರೆ ಹತ್ತು ವರ್ಷಗಳಲ್ಲಿ ಸಣ್ಣಪುಟ್ಟ ಕೆಲಸಗಳಿಗೆ ೮೮೦೦೦ ರೂಪಾಯಿಗಳನ್ನು ದುರಸ್ತಿ ಕಾರ್ಯಗಳಿಗೆ ಸುಮಾರು ೧೪೦೦೦ ರೂಪಾಯಿಗಳನ್ನು ಹಾಗೂ ಖಾಯಂ. ಕೆಲಸಗಳಿಗೆ